**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿಸಿ 6296 /2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಪ್ರದೀಪ್ ಕುಮಾರ್ | ಚಾ.ಸಾ-3 |
| ತಂದೆಯ ಹೆಸರು | - | ಕೆ ನಂಜೇಗೌಡ | ಪ್ರಾ.ಸಾ-1 |
| ವಯಸ್ಸು | - | 33 ವರ್ಷ | |
| ಉದ್ಯೋಗ | - | ಪಿಡಿಓ | |
| ವಾಸಸ್ಥಳ | - | ಮಂಡ್ಯ | |

ದಿನಾಂಕಃ 26-09-2023 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ದಿನಾಂಕಃ 16.01.2021 ರಂದು ಬೆಳಗ್ಗೆ ಸುಮಾರು 10.00 ಗಂಟೆಯ ಸಮಯದಲ್ಲಿ ನಗರಕೆರೆ ಗ್ರಾಮದ ಹಳೇ ಸ್ಕೂಲ್‌ನ ಪಶ್ಚಿಮ ದಿಕ್ಕಿಗೆ ಇರುವ ರಸ್ತೆಯ ಒತ್ತುವರಿಯನ್ನು ತೆರವುಗೊಳಿಸಲು ನಮ್ಮ ಕಾರ್ಯನಿರ್ವಹಣಾಧಿಕಾರಿಗಳು, ನಾನು, ಪಿ ಡಿ ಓ ಮತ್ತು ಸಿಬ್ಬಂದಿಯವರು ಹೋಗಿರುತ್ತೇವೆ. ಒತ್ತುವರಿಯನ್ನು ತೆರವುಗೊಳಿಸುತ್ತಿದ್ದ ಸಮಯದಲ್ಲಿ ಆರೋಪಿ 1 ರಿಂದ 3 ಮತ್ತು ಆರೋಪಿ 1 ರವರ ಕುಟುಂಬಸ್ಥರು ನಮ್ಮನ್ನು ಒತ್ತುವರಿಯನ್ನು ತೆರವುಗೊಳಿಸದಂತೆ ನಮ್ಮನ್ನು ತಡೆದಿರುತ್ತಾರೆ, ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ.

ನಾನು ಈ ಮೇಲೆ ಹೇಳಿದ ರೀತಿಯಲ್ಲಿ ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ-</u>**

ಆರೋಪಿತರು ಸಾರ್ವಜನಿಕ ಅಧಿಕಾರಿಗಳಾದ ಕಾರ್ಯನಿರ್ವಹಣಾಧಿಕಾರಿಗಳನ್ನು ಹಿಡಿದು ಎಳೆದಾಡಿ ಸರ್ಕಾರಿ ಕೆಲಸಕ್ಕೆ ಅಡ್ಡಿಯನ್ನುಂಟುಮಾಡಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರುಃ ಎಂ ಕೆ ಜೆ ಯವರಿಂದಃ</u>**

ನಾನು ನಗರಕೆರೆ ಗ್ರಾಮಪಂಚಾಯತಿಯಲ್ಲಿ *2018* ಜುಲೈ ರಿಂದ *2022* ಜುಲೈ ತನಕ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿರುತ್ತೇನೆ. ಸದರೀ ಜಾಗದಲ್ಲಿ ರಸ್ತೆ ಇದೆಯೆಂದು ತೋರಿಸಲು ನಿಮ್ಮ ಪಂಚಾಯತಿಯಲ್ಲಿ ದಾಖಲೆ ಇದೆಯಾ ಎಂದರೆ ಸಾಕ್ಷಿ ಕ್ರಯಪತ್ರ ಇದೆ ಮತ್ತು ನಮ್ಮ ಪಂಚಾಯತಿ ನಡಾವಳಿ ಇದೆಯೆಂದು ನುಡಿಯುತ್ತಾರೆ. ನಗರಕೆರೆಯ ಗ್ರಾಮನಕ್ಷೆಯನ್ನು ನೀವು ನೋಡಿದ್ದೀರಿ ಎಂದರೆ ಸರಿ. ನೀವು ತೆರವುಗೊಳಿಸಲು ಹೋಗಿದ್ದ ಸ್ಥಳದಲ್ಲಿ ಎಷ್ಟು ಅಡಿ ಉದ್ದ ಮತ್ತು ಅಗಲದ ರಸ್ತೆ ನಮೂದು ಇದೆಯಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಕ್ರಯಪತ್ರವನ್ನು ಯಾರು ಯಾವಾಗ ನೀಡಿದರು ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರೀ ಕ್ರಯಪತ್ರದ ಯಾವ ದಿಕ್ಕಿನಲ್ಲಿ ರಸ್ತೆ ಇದೆಯೆಂದರೆ ಸಾಕ್ಷಿ ಪಶ್ಚಿಮ ದಿಕ್ಕಿನಲ್ಲಿದೆಯೆಂದು ನುಡಿಯುತ್ತಾರೆ. ಸದರೀ ರಸ್ತೆ ಎಷ್ಟು ಅಡಿ ಉದ್ದ ಮತ್ತು ಎಷ್ಟು ಅಡಿ ಅಗಲ ಇದೆಯೆಂದು ನಮೂದು ಮಾಡಿಲ್ಲ. ಸದರೀ ಕ್ರಯಪತ್ರದಲ್ಲಿ ಸಾರ್ವಜನಿಕರು ತಿರುಗಾಡುವ ರಸ್ತೆ ಇದೆ ಎಂದು ನಮೂದು ಇದೆಯಾ ಎಂದರೆ ಸಾಕ್ಷಿ ತಿರುಗಾಡುವ ರಸ್ತೆ ಎಂದು ನಮೂದು ಇದೆ ಎಂದು ನುಡಿಯುತ್ತಾರೆ. ಸದರೀ ಕ್ರಯಪತ್ರವನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸದರೀ ರಸ್ತೆಯನ್ನು ಒತ್ತುವರಿಯಿಂದ ತೆರವುಗೊಳಿಸುವಂತೆ ಯಾರು ಆದೇಶ ಮಾಡಿದ್ದಾರೆಂದರೆ ಸಾಕ್ಷಿ ಕಾರ್ಯನಿರ್ವಹಣಾಧಿಕಾರಿ ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮಾಡಿದ್ದಾರೆಂದು ನುಡಿಯುತ್ತಾರೆ, ಆದರೆ ಸದರೀ ಪ್ರತಿಗಳನ್ನು ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.

ಆರೋಪಿ *1* ರವರು ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರಕ್ಕೆ ಅರ್ಜಿಯನ್ನು ನೀಡಿ, ಸದರೀ ಅರ್ಜಿಯಂತೆ ಸದರೀ ರಸ್ತೆಯನ್ನು ಒತ್ತುವರಿಯಿಂದ ತೆರವುಗೊಳಿಸಬಾರದೆಂದು ಆದೇಶ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರೀ ಆದೇಶದ ಪ್ರತಿಯನ್ನು

ಆರೋಪಿ *1* ರವರು ನಿಮ್ಮ ಗ್ರಾಮಪಂಚಾಯತಿಗೆ ನೀಡಿದ್ದರು ಎಂದರೆ ಸರಿಯಲ್ಲ. ಸದರೀ ಆದೇಶದ ಪ್ರತಿಯನ್ನು ನಿಮ್ಮ ಗ್ರಾಮಪಂಚಾಯತಿಯ ಪಿ ಡಿ ಓ, ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿಯವರಿಗೆ ಕೊಟ್ಟಿದ್ದರೂ ಕೂಡ ಇಲ್ಲಾ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ನಾವು ಬೆಳಗ್ಗೆ *10.00* ಗಂಟೆಗೆ ಹೋಗಿರುತ್ತೇವೆ. ಸದರೀ ಸ್ಥಳದಲ್ಲಿ ಎಷ್ಟು ಅಡಿ ಉದ್ದ ಮತ್ತು ಅಗಲದ ರಸ್ತೆಯನ್ನು ತೆರವು ಮಾಡಬೇಕೆಂದು ನಿಮಗೆ ಅಂದಾಜು ಇತ್ತಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ. ಸುಮಾರು *10-15* ಜನ ನಮಗೆ ಒತ್ತುವರಿಯನ್ನು ತೆರವುಗೊಳಿಸದಂತೆ ಅಡ್ಡಿಪಡಿಸಿರುತ್ತಾರೆ. ಸದರೀ ವಿಚಾರವನ್ನು ಪೋಲೀಸರಿಗೆ ನೀಡಿದ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ನನಗೆ ಆರೋಪಿ *1* ರವರ ಕುಟುಂಬ ಸದಸ್ಯರ ಹೆಸರು ಗೊತ್ತಿಲ್ಲ. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ವಾಸದ ಮನೆಗಳಿವೆಯೆಂದರೆ ಸರಿ. ಘಟನಾ ಸ್ಥಳದಲ್ಲಿ ಸುಮಾರು *100* ಜನ ಇದ್ದರು. ಘಟನಾ ಸ್ಥಳದ ಅಕ್ಕಪಕ್ಕದಲ್ಲಿ ಸಾರ್ವಜನಿಕ ರಸ್ತೆಗಳು ಇವೆಯೆಂದರೆ ಸರಿ. ನಿಮ್ಮ ಪಂಚಾಯತಿಯ ಯಾವುದೇ ದಾಖಲಾತಿಗಳಲ್ಲಿ ಘಟನಾ ಸ್ಥಳದಲ್ಲಿ ರಸ್ತೆ ಇದೆಯೆಂದು ನಮೂದು ಇಲ್ಲಾ ಎಂದರೆ ಸಾಕ್ಷಿ ಪಂಚಾಯತಿಯ ನಡಾವಳಿ ಇದೆಯೆಂದು ನುಡಿಯುತ್ತಾರೆ. ನಗರಕೆರೆಯಲ್ಲಿ ರಾಜಕೀಯವಾಗಿ ಎರಡು ಗುಂಪುಗಳಿವೆಯೆಂದರೆ ನನಗೆ ಗೊತ್ತಿಲ್ಲ. ಒಂದು ಗುಂಪಿನ ಬಲಾಢ್ಯರು ಸದರೀ ಜಾಗದಲ್ಲಿ ಯಾವುದೇ ರಸ್ತೆ ಇಲ್ಲದೇ ಇದ್ದರೂ ಕೂಡ ನಿಮ್ಮ ಮೇಲೆ ಮತ್ತು ನಿಮ್ಮ ಪಂಚಾಯತಿಯ ಸದಸ್ಯರ ಮೇಲೆ ಒತ್ತಡ ತಂದು, ಪಂಚಾಯತಿಯಲ್ಲಿ ನಡಾವಳಿಯನ್ನು ಮಾಡಿಸಿದ್ದಾರೆಂದರೆ ಸರಿಯಲ್ಲ. ಸದರೀ ಪಂಚಾಯತಿಯ ನಡಾವಳಿಯು *1963* ನೇ ಇಸವಿಯದ್ದಾಗಿರುತ್ತದೆ. ಸದರೀ ಪಂಚಾಯತಿಯ ನಡಾವಳಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲಾ.

ಸದರೀ ನಡಾವಳಿಯಂತೆ ನಿಮ್ಮ ಮೇಲೆ ಒಂದು ಪಕ್ಷದ ಮುಖಂಡರು ಒತ್ತಡವನ್ನು ತಂದು, ಘಟನಾ ಸ್ಥಳದಲ್ಲಿದ್ದ ರಸ್ತೆಯನ್ನು ಒತ್ತುವರಿಯನ್ನು ತೆರವು ಗೊಳಿಸಲು ಬಂದಿರುತ್ತೀರಿ ಎಂದರೆ ಸರಿಯಲ್ಲ. ಆರೋಪಿತರು ಘಟನಾ ಸ್ಥಳದಲ್ಲಿದ್ದು, ನಮಗೆ ಮತ್ತು ಪಿ ಡಿಓ ಮತ್ತು ಕಾರ್ಯನಿರ್ವಹಣಾಧಿಕಾರಿಗಳಿಗೆ ಒತ್ತುವರಿಯನ್ನು ತೆರವುಗೊಳಿಸದಂತೆ ಅಡ್ಡಿಪಡಿಸಿ ರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ . ಆರೋಪಿತರು ನಮ್ಮನ್ನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದಾರೆಂದರೆ ಸರಿಯಲ್ಲ. ಆರೋಪಿತರು

ನಿಮ್ಮ ಸಾರ್ವಜನಿಕ ಕೆಲಸಕ್ಕೆ ಯಾವುದೇ ಅಡ್ಡಿ ಉಂಟು ಮಾಡದೇ ಇದ್ದರೂ, ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸ್ಥಳಕ್ಕೆ ಬಂದಿದ್ದ, ಸರ್ವೇಯರ್ ರವರು ಅಳತೆ ಕಾರ್ಯವನ್ನು ಮುಗಿಸಿದ್ದರು. ಆರೋಪಿತರು ಯಾವುದೇ ಅಕ್ರಮ ಕೂಟವನ್ನು ಕಟ್ಟಿಕೊಂಡು ಬಂದಿರುವುದಿಲ್ಲ ಮತ್ತು ನಿಮ್ಮ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ *1* ರವರು ಘಟನಾ ಸ್ಥಳ ನಮ್ಮ ಪಿತ್ರಾರ್ಜಿತ ಆಸ್ತಿಯೆಂದು ನಿಮ್ಮ ಇ ಓ ಮತ್ತು ಪಂಚಾಯತಿ ಅಭಿವೃದ್ದಿ ಅಧಿಕಾರಿಗಳನ್ನು ಪ್ರಶ್ನಿಸಿದಾಗ ನೀವು ಆರೋಪಿತರ ವಿರುದ್ದ ದೂರು ನೀಡಿದರೆ ಅವರು ಸುಮ್ಮನೆ ಆಗುತ್ತಾರೆಂದು ಹೇಳಿ ಒಂದು ಸುಳ್ಳು ದೂರನ್ನು ನೀಡಿರುತ್ತಾರೆಂದರೆ, ಸದರೀ ದೂರಿಗೆ ಪೂರಕವಾಗುವಂತೆ ನೀವು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲೀಸರು ನಿಮ್ಮ ಹೇಳಿಕೆಯನ್ನು ಪಡೆದುಕೊಳ್ಳಲು ನಿಮಗೆ ನೋಟೀಸ್ ನೀಡಿದ್ದರಾ ಎಂದರೆ ಸಾಕ್ಷಿ ನಮಗೆ ದೂರವಾಣಿ ಕರೆ ಮಾಡಿ ಕರೆದಿರುತ್ತಾರೆಂದು ನುಡಿಯುತ್ತಾರೆ . ಯಾವ ದಿನಾಂಕ ಮತ್ತು ಎಷ್ಟು ಹೊತ್ತಿಗೆ ಪೋಲೀಸರು ನಿಮಗೆ ಕರೆ ಮಾಡಿದ್ದರು ಎಂದರೆ ನನಗೆ ದಿನಾಂಕ ಮತ್ತು ಸಮಯ ನೆನಪಿಲ್ಲ ಎಂದು ನುಡಿಯುತ್ತಾರೆ.

ಪೋಲೀಸರು ಸಾಯಂಕಾಲ *04.00-05.00* ಗಂಟೆಯ ತನಕ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನನ್ನ ಹೇಳಿಕೆಯನ್ನು ಪಡೆದುಕೊಂಡ ಪೋಲೀಸರ ಹೆಸರು ನನಗೆ ಗೊತ್ತಿಲ್ಲ. ನೀವು ಯಾವುದೇ ಹೇಳಿಕೆಯನ್ನು ನೀಡದೇ ಇದ್ದರೂ ಪೋಲೀಸರು ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿ ಮಾಡಿದ್ದಾರೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ